ಚಿತ್ರಪಟ ಕಥನ

■ ಪ್ರಕಾಶ ಕಂದಕೂರ

# ಮಂಡಾಳು ರುಚಿಕರ ಭಟ್ಟಿ ಮಂದಿ ತತ್ತರ



ಮೈದಾನದಲ್ಲಿ ಚಾಪೆ ಮೇಲೆ ಬಿಸಿಲಿಗೆ ಅಕ್ಕಿ ಒಣಗಿಸುತ್ತಿರುವುದು



ಉತ್ತರ ಕರ್ನಾಟಕದ 'ಆಹಾರ ನಕ್ಷೆ'ಯಲ್ಲಿ ಮಂಡಾಳಿಗೆ ಪ್ರಮುಖ ಸ್ಥಾನವಿದ್ದರೆ, ಮಂಡಾಳು ತಯಾರಿಕೆಯಲ್ಲಿ ಕೊಪ್ಪಳಕ್ಕೆ ಪ್ರಾಮುಖ್ಯತೆಯಿದೆ. ಇತ್ತೀಚಿನ ವರ್ಷಗಳಲ್ಲಿ ಮಂಡಾಳು ಭಟ್ಟಿಯ ಮಾಲೀಕರು ಮತ್ತು ಕಾರ್ಮಿಕರು, 'ಈ ವೃತ್ತಿಯ ಸಹವಾಸವೇ ಸಾಕು' ಎನ್ನುವಷ್ಟು ಬೇಸತ್ತಿದ್ದಾರೆ. ಅವರ ಬೇಸರಕ್ಕೆ ಕಾರಣವಾದರೂ ಏನು?